ವಿಷಯ :– ಕೊಡಗು ಜಿಲ್ಲೆಯಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರುವ ದೇವಸ್ಥಾನಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 727 (1145)

ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬರುವ ದೇವಸ್ಥಾನಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಈ ದೇವಸ್ಥಾನಗಳ ಹೆಸರು ಮತ್ತು ವಿಳಾಸವನ್ನು ನೀಡುವುದು ?

ಇ) ಈ ದೇವಸ್ಥಾನಗಳಿಗೆ 1988–89 ಮತ್ತು 1989–90 ನೇ ಸಾಲುಗಳಿಗಾಗಿ ಜೀರ್ಣೋದ್ಧಾರ, ಕಲ್ಯಾಣ ಮಂಟಪ ನಿರ್ಮಾಣ ಹಾಗೂ ಇತರೆ ನಿರ್ಮಾಣ ಕೆಲಸದ ಸಲುವಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ?

ಈ) ಪ್ರತಿಯೊಂದು ದೇವಸ್ಥಾನಗಳಿಗೆ ಯಾವ ಯಾವ ಕೆಲಸಗಳಿಗೆ ಹಣ ಬಿಡುಗಡೆ ಮಾಡಲಾಗಿದೆ ? (ಪ್ರತ್ಯೇಕ ವಿವರ ನೀಡುವುದು.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) 8 (ಎಂಟು)
ಪಟ್ಟಿ ಲಗತ್ತಿಸಿದೆ.

ಆ) ಪಟ್ಟಿ ಲಗತ್ತಿಸಿದೆ.

ಇ) 1988–89 ರಲ್ಲಿ ಇಲ್ಲ. 1989–90 ರಲ್ಲಿ ರೂ. 5.00 ಲಕ್ಷ ಮಾತ್ರ.

ಈ) ಮಡಿಕೇರಿ ತಾಲ್ಲೂಕು ತಲಕಾವೇರಿಯಲ್ಲಿ ಅನ್ನ ಛತ್ರ ನಿರ್ಮಾಣಕ್ಕಾಗಿ ರೂ. 5.00 ಲಕ್ಷವನ್ನು ಅನುದಾನವಾಗಿ ಸರ್ಕಾರದ ಆದೇಶ ಸಂಖ್ಯೆ ಕಂಇ. 263 ಮುಭೂಆ 89 ದಿನಾಂಕ 30–12–89 ರಲ್ಲಿ ಮಂಜೂರು ಮಾಡಿದೆ.

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು ಮತ್ತು ವಿಳಾಸ	ತಾಲ್ಲೂಕ್
1)	ಶ್ರೀ ಓಂಕಾರೇಶ್ವರ ಪಗೋಡ (ದೇವಾಲಯ) ಮಡಿಕೇರಿ	ಮಡಿಕೇರಿ
2)	ಶ್ರೀ ಓಂಕಾರೇಶ್ವರ ಛತ್ರ, ಮಡಿಕೇರಿ	—,,—
3)	ಶ್ರೀ ರಾಜರ ಗದ್ದುಗೆ, ಮಡಿಕೇರಿ	—,,—
4)	ಶ್ರೀ ತಾವಂದ ಪಗೋಡ (ದೇವಸ್ಥಾನ) ಭಾಗಮಂಡಲ	—,,—
5)	ಶ್ರೀ ತಾವಂದ ಛತ್ರ, ಭಾಗಮಂಡಲ	—,,—
6)	ಶ್ರೀ ಸುಬ್ರಾಯ ದೇವಸ್ಥಾನ, ಕುಂಜಿಲಾ ಗ್ರಾಮ ನಾಪುಕ್ಲು ಹೋಬಳಿ	—,,—
7)	ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಮತ್ತು ಹರಿಶ್ಚಂದ್ರ ದೇವಸ್ಥಾನ ಪಾಲೂರ ಗ್ರಾಮ	—,,—
8)	ಶ್ರೀ ಇರುಪು ಶ್ರೀ ರಾಮೇಶ್ವರ ದೇವಸ್ಥಾನ ಕುರ್ಚಿ ಗ್ರಾಮ	ವೀರಾಜಪೇಟೆ ತಾಲ್ಲೂಕು

ವಿಷಯ :– ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಖರ್ಚು ಮಾಡಿರುವ ಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 728 (1071)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

ಅ) 1985–86 ರಿಂದ ಈವರೆಗೆ ಪ್ರತಿವರ್ಷ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಹಾಗೂ ಹೊಸ ದೇವಸ್ಥಾನಗಳ ನಿರ್ಮಾಣಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು ?

ಆ) ಪ್ರತಿ ವರ್ಷ ಈ ಇಲಾಖೆ ಸಿಬ್ಬಂದಿಯವರಿಗೆ (1985–86) 1985 ರಿಂದ ಈವರೆಗೆ ಪ್ರತಿವರ್ಷ ಖರ್ಚು ಮಾಡುತ್ತಿರುವ ಹಣವೆಷ್ಟು ?